



ಮುಂಜಾನೆದ್ದು ಗುಂಡ ಫೇಸ್‌ಬುಕ್ ಓಪನ್ ಮಾಡಿ ಕೂತ. ಆತನ ಮಹಿಳಾ ಮೈತ್ರಿಣಿಯೋರ್ವಳು ಸ್ಯಾಂಡ್‌ವಿಚ್ ಫೋಟೊ ಅಪ್‌ಲೋಡ್ ಮಾಡಿ, 'ಬನ್ನಿ ಎಲ್ಲರೂ ಉಪಾಹಾರ ಮಾಡೋಣ' ಎಂದು ಬರೆದಳು. ಗುಂಡ ಖುಷಿಯಿಂದ ಬರೆದ, 'ಉಪಾಹಾರ ತುಂಬಾ ಚೆನ್ನಾಗಿತ್ತು, ಹೊಟ್ಟೆ ತುಂಬಿ ಹೋಯಿತು'. ಅದನ್ನು ಶ್ರೀಮತಿ ಗುಂಡ ನೋಡಿ ಬಿಟ್ಟಳು. ತತ್ಪರಿಣಾಮವಾಗಿ ಗುಂಡನಿಗೆ ಅಂದಿನ ಬೆಳಗ್ಗಿನ ಉಪಾಹಾರ ಸಿಗಲಿಲ್ಲ! ಮತ್ತೆ ನಾಲ್ಕು ಗಂಟೆಗಳ ಬಳಿಕ ಗುಂಡನ ಬಳಿ ಬಂದ ಶ್ರೀಮತಿ ಹೀಗೆ ವಿಚಾರಿಸಿದಳು, 'ಮಧ್ಯಾಹ್ನಕ್ಕೆ ಅಡುಗೆ ಮಾಡಲೇ ಅಥವಾ ಅದನ್ನೂ ಫೇಸ್‌ಬುಕ್‌ನಲ್ಲೇ ಮಾಡಿ ಮುಗಿಸುತ್ತೀರಾ'?

ಟೀವಿಯಲ್ಲಿ ಆದರ್ಶ ದಂಪತಿ ಕಾರ್ಯಕ್ರಮ ನಡೆಸಿಕೊಡುತ್ತಿದ್ದ ನಿರೂಪಕಿ ಸ್ಪರ್ಧಿಗಳನ್ನುದ್ದೇಶಿಸಿ ಹೇಳಿದಳು. 'ಆದರ್ಶ ದಂಪತಿ ಎಂದರೆ ಯಾರು? ಅನುಭವಿ ಸ್ಪರ್ಧಿ ಗುಂಡ ಚುಟುಕಾಗಿ ಉತ್ತರಿಸಿದ, 'ಮೂಕ ಹೆಂಡತಿ ಮತ್ತು ಕಿವುಡು ಗಂಡ'!

★★★

ಬಿಗ್ ಬಜಾರ್‌ಗೆ ಹೋಗಿದ್ದ ಗುಂಡ ಅಲ್ಲಿದ್ದ ಸುಂದರ ಯುವತಿಯ ಸನಿಹ ಹೋಗಿ, 'ಕ್ಷಮಿಸಿ ಮಿಸ್, ನನ್ನ ಪತ್ನಿ ಈ ಶಾಪಿಂಗ್ ಮಾಲ್‌ನಲ್ಲಿ ಕಳೆದುಹೋಗಿದ್ದಾಳೆ. ಹೀಗಾಗಿ, ನಿಮ್ಮ ಬಳಿ ಕೊಂಚ ಹೊತ್ತು ಮಾತಾಡಬಹುದೇ?' ಎಂದು ಕೇಳಿದ. ಆಕೆ ಅಚ್ಚರಿ ವ್ಯಕ್ತಪಡಿಸುತ್ತಾ ಏಕೆಂದು ವಿಚಾರಿಸಿದಾಗ ಗುಂಡ ಸ್ಪಷ್ಟೀಕರಣ ನೀಡಿದ, 'ಏಕೆಂದರೆ ಪ್ರತಿ ಬಾರಿ ನಾನು ಸುಂದರ ಸ್ತ್ರೀಯರ ಬಳಿ ಮಾತಾಡುವಾಗ ಪತ್ನಿ ಎಲ್ಲಿದ್ದರೂ ನನ್ನೆದುರು ಪ್ರತ್ಯಕ್ಷಳಾಗುತ್ತಾಳೆ'!

★★★

ಪುರುಷರು ನಿಜವಾಗಿ ಒಳ್ಳೆಯವರೋ ಕೆಟ್ಟವರೋ ಎಂಬ ಸ್ತ್ರೀಯರ ವಾದಕ್ಕೆ ನ್ಯಾಯಾಧೀಶ ಗುಂಡಪ್ಪನವರಿತ್ತ ತೀರ್ಪು, 'ಪುರುಷರು ಅವರವರ ಪತ್ನಿಯಂದಿರು ಬಿಂಬಿಸುವಷ್ಟು ಕೆಟ್ಟವರಲ್ಲ. ಹಾಗಂತ ಅವರವರ ಅಮ್ಮಂದಿರು ಹೇಳುವಷ್ಟು ಒಳ್ಳೆಯವರೂ ಅಲ್ಲ!

★★★

ಗೆಳೆಯ: ನೀನು ಪ್ರತಿದಿನ ಕುಡಿಯುತ್ತಿರುವೆ, ಮನೆಯಲ್ಲಿ ನಿನ್ನ ಪತ್ನಿ ಏನೂ ಅನ್ನುವುದಿಲ್ಲವೆ?
ಗುಂಡ: ಅನ್ನುತ್ತಾಳೆ, ಆದರೆ ಅದು ನನ್ನನ್ನೇನೂ ಬಾಧಿಸುವುದಿಲ್ಲ.
ಗೆಳೆಯ: ಅದೇಕೆ?
ಗುಂಡ: ಏಕೆಂದರೆ ಅವಳು, 'ನಿಮ್ಮ ಗೆಳೆಯರೆಲ್ಲಾ ಹಾಳಾಗಿಹೋಗಲಿ' ಎಂದಷ್ಟೇ ಶಪಿಸುತ್ತಾಳೆ!

★★★

ಶ್ರೀಮತಿ ಗುಂಡ: (102 ಸಂಖ್ಯೆಗೆ ಡಯಲ್ ಮಾಡಿ) ಅಂಬುಲೆನ್ಸ್ ಪ್ಲೀಸ್.
ಅಂಬುಲೆನ್ಸ್ ಸಿಬ್ಬಂದಿ: ಏನಾಯಿತು ಮೇಡಂ?
ಶ್ರೀಮತಿ ಗುಂಡ: ನನ್ನ ಸೀರೆ ಮೇಲೆ ಬಿಸಿ ಕಾಫಿ ಬಿತ್ತು.
ಅಂಬುಲೆನ್ಸ್ ಸಿಬ್ಬಂದಿ: ಈ ಕಾರಣಕ್ಕೆ ನಿಮಗೆ ನಿಜವಾಗಿಯೂ ಅಂಬುಲೆನ್ಸ್ ಅವಶ್ಯಕತೆಯಿದೆಯೇ?
ಶ್ರೀಮತಿ ಗುಂಡ: ಅದೇನಾಯ್ತು ಅಂದ್ರೆ. ನನ್ನ ಸೀರೆ ಮೇಲೆ ಬಿಸಿ ಕಾಫಿ ಬಿದ್ದಾಕ್ಷಣ ನನ್ನ ಪತಿ ಗೊಳ್ಳಂತ ನಕ್ಕು ಬಿಟ್ಟರು.
ಅಂಬುಲೆನ್ಸ್ ಸಿಬ್ಬಂದಿ: ಅರ್ಥವಾಯಿತು ಬಿಡಿ, ಎರಡು ನಿಮಿಷದಲ್ಲಿ ನಾವು ನಿಮ್ಮಲ್ಲಿಗೆ ಆಗಮಿಸುತ್ತೇವೆ!

★★★

ಗುಂಡ ವಾಟ್ಸ್ಆ್ಯಪ್ ಗ್ರೂಪಿನಲ್ಲಿ ಹೀಗೊಂದು ಸಂದೇಶ ರವಾನಿಸಿದ, 'ವೆಬ್‌ಸೈಟಿನಲ್ಲಿ 'ಫುಡ್ ಆಫ್' ಎನ್ನುವ ಆ್ಯಪ್ ಒಂದನ್ನು ಅಳವಡಿಸಿ ನಾನೊಂದು ವ್ಯಾಪಾರ ಆರಂಭಿಸುತ್ತಿದ್ದೇನೆ. ಅದರ ಮೂಲಕ ತಾವೆಲ್ಲರೂ ತಮ್ಮ ದೇಹತೂಕವನ್ನು ಗಣನೀಯವಾಗಿ ಇಳಿಸಿಕೊಳ್ಳಬಹುದು. ಅದಕ್ಕೆ ನಿಮ್ಮೆಲ್ಲರ ಆಶೀರ್ವಾದ ಮತ್ತು ಶುಭಾಕಾಂಕ್ಷೆ ಬೇಕು'. 'ಅದು ಹೇಗೆ ಕಾರ್ಯ ನಿರ್ವಹಿಸುತ್ತದೆ' ಎಂದು ಸದಸ್ಯರು ಸಂಶಯ ವ್ಯಕ್ತಪಡಿಸಿದಾಗ ಗುಂಡ ಸ್ಪಷ್ಟೀಕರಣ ನೀಡಿದ್ದು ಹೀಗೆ, 'ಅದು ತುಂಬಾ ಸರಳ. ಈ ಆ್ಯಪ್ ಮೂಲಕ ನೀವು ಆಹಾರ ಆರ್ಡರ್ ಮಾಡಿ ಮತ್ತು ನಾನು ನಿಮಗೆ ಏನನ್ನೂ ಡೆಲಿವರಿ ನೀಡುವುದಿಲ್ಲ, ಅಷ್ಟೇ..!'

(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ


